( ತುರ್ತು )

**ಕರ್ನಾಟಕ ಸರ್ಕಾರ**

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ4(7) ಪ್ರೌ.ಶಿ ವರ್ಗ: 09/2019-20 ದಿನಾಂಕ:27/09/2019

**-ಜ್ಞಾಪನ-**

**ವಿಷಯ** : 2018-19ನೇ ಸಾಲಿನ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ವೃಂದದ ಅಂತರ ಘಟಕ ವರ್ಗಾವಣಾ ಕೌನ್ಸಿಲಿಂಗ್‌ಗೆ ಕ್ರಮ ಸಂಖ್ಯೆ ವಾರು ವೇಳಾಪಟ್ಟಿ ನಿಗಧಿಪಡಿಸುವ ಬಗ್ಗೆ.

ಉಲ್ಲೇಖ : ಈ ಕಛೇರಿ **ಜ್ಞಾಪನ ಸಮ ಸಂಖ್ಯೆ, ದಿನಾಂಕ** : 16.09.2019.

-----****-----

ವಿಷಯದನ್ವಯ ದಿನಾಂಕ: 23.09.2019 ರಿಂದ ನಡೆಯಬೇಕಾದ ಅಂತರ ಘಟಕ ವರ್ಗಾವಣೆಗಳನ್ನು ಮುಂದೂಡಲಾಗಿತ್ತು. ಈಗ ಪುನಃ ಪ್ರಾರಂಬಿಸಲು ಉದ್ದೇಶಿಸಿರುವುದರಿಂದ ಉಳಿದ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಮುಂದುವರೆಸುತ್ತಾ ಕೆಳಗಿನಂತೆ ಕ್ರಮ ಸಂಖ್ಯೆವಾರು ಅಭ್ಯರ್ಥಿಗಳನ್ನು ಕೌನ್ಸಿಲಿಂಗ್‌ಗೆ ನಿಗಧಿಪಡಿಸಿದೆ.

| ಕ್ರಮ ಸಂಖ್ಯೆ | ದಿನಾಂಕ | ಅಂತಿಮ ಆಧ್ಯತಾ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆಗಳಂತೆ |
|---|---|---|
| | | **ಸಹ ಶಿಕ್ಷಕರು** |
| 5 | 30.09.2019 ಸೋಮವಾರ | 1401 ರಿಂದ 1611 ರ ವರೆಗಿನ ಪ್ರೌಢ ಶಾಲಾ ಸಹ ಶಿಕ್ಷಕರು (ನಾಲ್ಕು ವಿಭಾಗಗಳು ಸೇರಿ) |
| | | ದೈಹಿಕ ಶಿಕ್ಷಣ ಶಿಕ್ಷಕರು |
| 6 | 01.10.2019 ಮಂಗಳವಾರ | 1 ರಿಂದ 221 (ನಾಲ್ಕು ವಿಭಾಗಗಳು ಸೇರಿ) |
| | | ವಿಶೇಷ ಶಿಕ್ಷಕರು |
| 7 | 03.10.2019 ಗುರುವಾರ | 1 ರಿಂದ 178 (ನಾಲ್ಕು ವಿಭಾಗಗಳು ಸೇರಿ) |
| 8 | 04.10.2019 ಶುಕ್ರವಾರ | ಪರಸ್ಪರ ವರ್ಗಾವಣೆ ಪ್ರಕ್ರಿಯೆಗಳು |

ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರುಗಳು ಕೌನ್ಸಿಲಿಂಗ್ ಸಂದರ್ಭದಲ್ಲಿ ಶಿಕ್ಷಕರ ಗುರುತಿನ ಚೀಟಿ, ಮೂಲ ಅರ್ಜಿ ಮತ್ತು ಆದ್ಯತೆಗೆ ಸಂಬಂಧಿಸಿದ ಮೂಲ ದಾಖಲೆಗಳು ಕೆಳಕಂಡ ಕಡ್ಡಾಯವಾಗಿ ತರುವುದು.

1. ತೀವ್ರತರ ಖಾಯಿಲೆ ಪ್ರಕರಣ-ಅಂಗವಿಕಲ ಪ್ರಕರಣಗಳಲ್ಲಿ- ವೈದ್ಯಕೀಯ ಮಂಡಳಿಯಿಂದ ನಿಡಿರುವ ಪ್ರಮಾಣ ಪತ್ರದೊಂದಿಗೆ.ಹಿಂದಿನ ವೈದ್ಯಕೀಯ ತಪಾಸಣೆಯ ಮತ್ತು ಚಿಕಿತ್ಸೆ ದಾಖಲೆಗಳು, ವೈದ್ಯಕೀಯ ಮಂಡಳಿ ಎಂದರೆ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಯ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.
2. ವರ್ಗಾವಣೆ ಅರ್ಜಿ ಬಿ.ಇ.ಓ ಅನುಮೋದಿತ ಪ್ರತಿ ಮತ್ತು ಸೇವಾ ದೃಡೀಕರಣ ಪತ್ರ ತರುವುದು.
3. ವೈದ್ಯಕೀಯ ವೆಚದ ಮರುಪಾವತಿ ಪಡೆದ ಬಗೆ ದೃಡೀಕರಣಪತ್ರ ತರುವುದು.

4. ವಿಧವಾ ಪ್ರಕರಣ ಇದ್ದಲ್ಲಿ ಪತಿಯ ಮರಣ ಪ್ರಮಾಣ ಪತ್ರ ತರುವುದು.
5. ವಿಚ್ಛೇದಿತ ಮಹಿಳೆ ಪ್ರಕರಣದಲ್ಲಿ ವಿಚ್ಛೇದನ ಪ್ರಮಾಣ ಪತ್ರ ಮತ್ತು ಮಗುವಿನ ಅವಲಂಬಿತ ಪ್ರಮಾಣಪತ್ರ ತರುವುದು.
6. ಅಂಗವಿಕಲರಾಗಿದ್ದಲ್ಲಿ, ಮೂಲ ಅಂಗವಿಕಲ ಪ್ರಮಾಣ ಪತ್ರ ಮತ್ತು ಅಂಗವಿಕಲ ಭತ್ಯೆ ಪಡೆಯುತ್ತಿರುವ ಬಗ್ಗೆ ದೃಡೀಕರಣಪತ್ರ ತರುವುದು.
7. ಪತಿ-ಪತ್ನಿ ಪ್ರಕರಣದಲ್ಲಿ ಪತಿ-ಪತ್ನಿ ಸಂಬಂಧ ದೃಡಪಡಿಸುವದಾಖಲೆ ಮತ್ತು ಸಕ್ಷಮ ಪ್ರಾಧಿಕಾರ ನೀಡುವ ಸೇವಾ ಪ್ರಮಾಣ ಪತ್ರ ತರುವುದು.
8. ಉಳಿದಂತೆ ಅವರವರ ಆದ್ಯತೆ ದೃಡೀಕರಿಸುವ ಅಗತ್ಯ ಪ್ರಮಾಣ ಪತ್ರಗಳನ್ನು ತಪ್ಪದೆ ಹಾಜರು ಪಡಿಸುವುದು.
9. ಯಾವುದೇ ಶಿಕ್ಷಕರಿಗೆ ವೈಯಕ್ತಿಕವಾಗಿ ಕೌನ್ಸಲಿಂಗ್‌ಗೆ ಹಾಜರಾಗಲು ಪತ್ರಗಳನ್ನು ಕಳುಹಿಸಲಾಗುವುದಿಲ್ಲ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಜ್ಞಾಪನ ಪತ್ರದಂತೆ ಹಾಜರಾಗಲು ತಿಳಿಸಿದೆ.
10. **ಇದು ಕೇಂದ್ರ ಕಛೇರಿಯ ಅಧೀನದಲ್ಲಿ ನಡೆಯಬೇಕಾದ ಕೌನ್ಸಲಿಂಗ್ ಆದ್ದರಿಂದ ಎಲ್ಲಾ ಶಿಕ್ಷಕರು ಕಡ್ಡಾಯವಾಗಿ ಬೆಂಗಳೂರಿನಲ್ಲಿ ನಿಗಧಿಪಡಿಸಿದ ಸ್ಥಳದಲ್ಲಿ ಕೌನ್ಸಲಿಂಗ್ ಹಾಜರಾಗುವುದು.**

**ಕೌನ್ಸಿಲಿಂಗ್ ನಡೆಯುವ ಸ್ಥಳ: ಎಂ.ಎಲ್.ಎ ಪ್ರೌಢ ಶಾಲೆ.15ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬೆಂಗಳೂರು ಉತ್ತರ ವಲಯ-2.**
**ಕೌನ್ಸಿಲಿಂಗ್ ಸಮಯ: ಪ್ರತಿ ದಿನ ಬೆಳಗ್ಗೆ 10.00 ಗಂಟೆಯಿಂದ.**

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

(ಕೆ.ಎಸ್.ಮಣಿ)
ನಿರ್ದೇಶಕರು(ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ,

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ/ ಧಾರವಾಡ.
2. ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಗುಲಬರ್ಗಾ ಮತ್ತು ಬೆಳಗಾವಿ.
3. ರಾಜ್ಯದ ಎಲ್ಲಾ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ (ಇ-ಮೇಲ್ ಮುಖಾಂತರ) ಹಾಗೂ ವ್ಯಾಪಕ ಪ್ರಚಾರ ನೀಡಲು ತಿಳಿಸಿದೆ.
4. ಹಿರಿಯ ಸಹಾಯಕ ನಿರ್ದೇಶಕರು, ಇ-ಗೌರ್ನೆನ್ಸ್, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಇಲಾಖಾ ವೆಬ್-ಸೈಟ್ನಲ್ಲಿ ತಕ್ಷಣ ಪ್ರಕಟಿಸಲು ತಿಳಿಸಿದೆ.